ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಉಪಾಧ್ಯಕ್ಷರೇ, ಹುಡ್ಕೋ ಸಾಲ ಕೊಟ್ಟು ನಾವು ಮನೆಗಳನ್ನು ಕಟ್ಟಿಸಿದಾಗ ಆರ್ಥಿಕ ಇಲಾಖೆ ಹಣ ಬಿಡುಗಡೆ ಮಾಡುವಂತಹ ಪ್ರಶ್ನೆ ಬರುವುದಿಲ್ಲ. ನಾವು ಹುಡ್ಕೋದಿಂದ ಹಣವನ್ನು ಪಡೆದುಕೊಂಡು ಮನೆಗಳನ್ನು ಕಟ್ಟಿಸುತ್ತೇವೆ. ಬರುವ ಮುಂದಿನ ವರ್ಷದ ಅನುದಾನದಲ್ಲಿ ಅದನ್ನು ವಾಪಸ್ಸು ಕೊಡುತ್ತಾ ಬರುತ್ತೇವೆ. ಈ ಒಂದು ಕಾರ್ಯಕ್ರಮವನ್ನು ಹಾಕಿದ್ದೇವೆ.

ಶ್ರೀ ಬಿ. ಶಿವರಾಂ: ಹುಡ್ಕೋದವರು 100 ಪರ್ಸೆಂಟ್ ಹಣ ಕೊಡುತ್ತಾರಾ? ಇದು ಒಂದು. 1997-98ನೇ ಸಾಲಿಗೆ ಕೇಂದ್ರ ಸರ್ಕಾರವರು ಹಣ ಬಿಡುಗಡೆ ಮಾಡಿದ್ದಾರಾ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : 1997-98ನೇ ಸಾಲಿನ ಹಣವನ್ನು ಕೇಂದ್ರ ಸರ್ಕಾರದವರು ಬಿಡುಗಡೆ ಮಾಡಿದ್ದಾರೆ.

ರಾಜ್ಯ ಹೆದ್ದಾರಿಯ ಸುಧಾರಣೆ

195 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಾಗೇಪಲ್ಲಿ-ಕೋಲಾರ-ಬಂಗಾರಪೇಟೆ ರಾಜ್ಯ ಹೆದ್ದಾರಿಯು ಹಾಳಾಗಿದ್ದು ಸಂಚಾರಕ್ಕೆ ಯೋಗ್ಯವಿಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಈ ರಸ್ತೆಯ ಸುಧಾರಣೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಇ) *ಈ ರಾಜ್ಯ ಹೆದ್ದಾರಿಯನ್ನು ವಿಶಾಲಗೊಳಿಸುವ ಪ್ರಸ್ತಾಪ ಸರ್ಕಾರದವರ ಮುಂದಿದೆಯೇ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಸ್ತೆಯು ಸಂಚಾರಕ್ಕೆ ಯೋಗ್ಯವಾಗಿದೆ.

ಆ) ರಸ್ತೆ ಸುಧಾರಣೆಗೆ ಮಳೆಹಾನಿ ದುರಸ್ತಿಯಲ್ಲಿ 1996-97 ಮತ್ತು 1997-98ನೇ ಸಾಲಿಗೆ ದುರಸ್ತಿ ಹಾಗೂ ಅಭಿವೃದ್ಧಿಗಾಗಿ ಮಳೆಹಾನಿ ಶೀರ್ಷಿಕೆಯಡಿ ಆಯ್ದ ಭಾಗಗಳಿಗೆ48.00 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಸದರೀ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ತೆಗೆದುಕೊಂಡು ಪ್ರಗತಿಯಲ್ಲಿರುತ್ತದೆ.

ಇ) ಸದ್ಯಕ್ಕೆ ಪ್ರಸ್ತಾಪ ಇರುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ನಾನು ಪ್ರಶ್ನೆಯನ್ನು ಸಂಚಾರಕ್ಕೆ ಯೋಗ್ಯವಿದೆಯೇ ಎಂದು ಕೇಳಿದರೆ ಯೋಗ್ಯವಿದೆ ಎಂದು ಹೇಳಿದ್ದಾರೆ. ಆದರೆ ಅದು ಸಂಚಾರಕ್ಕೆ ಯೋಗ್ಯವಿಲ್ಲ. ಇದು ಒಂದು ಬಹಳ ಪ್ರಮುಖವಾದಂತಹ ರಸ್ತೆ ಅದು ರಾಜ್ಯ ಹೆದ್ದಾರಿ. ರಾಷ್ಟ್ರೀಯ ಹೆದ್ದಾರಿ4 ರಿಂದ7ಕ್ಕೆ ಸುಮಾರು4 ತಾಲ್ಲೂಕುಗಳ ಮೇಲೆ ಹಾದು ಹೋಗಿ ಲಿಂಕ್ ಕೊಡತಕ್ಕಂಥ ಒಂದು ರಸ್ತೆ. ಮತ್ತು ತಮಿಳುನಾಡಿಗೆ ಎಲ್ಲಾದಕ್ಕೂ ಸಂಪರ್ಕ ಇರತಕ್ಕಂಥ ಒಂದು ಪ್ರಮುಖವಾದಂತಹ ರಸ್ತೆ. ಇದು ಸುಮಾರು30-40 ವರ್ಷಗಳಿಂದ ರಿಪೇರಿಯಾಗಿಲ್ಲ, ಟಾರು ಹಾಕಿಲ್ಲ, ಮೋರಿ ರಿಪೇರಿಯಾಗಿಲ್ಲ, ಏನೂ ಇಲ್ಲ. ವಿಪರೀತವಾದಂತಹ ಟ್ರಾಫಿಕ್ ಇರುತ್ತದೆ. ಸುಮಾರು ಸಲ ಇದನ್ನು ಸರ್ಕಾರದ ಗಮನಕ್ಕೆ

ತಂದಿದ್ದೇನೆ. ಆಗಿಲ್ಲ, ಆದರೆ ನಾನು ಪ್ರಶ್ನೆ ಕೇಳುವುದೇನೆಂದರೆ ಬಾಗೇಪಲ್ಲಿ, ಕೋಲಾರ, ಬಂಗಾರಪೇಟೆ, ಇದು ರಾಜ್ಯ ಹೆದ್ದಾರಿ. ಅವರು ಕೋಲಾರದಿಂದ ಚಿಂತಾಮಣಿಯವರೆಗೆ 10-15 ಕಿಲೋಮೀಟರ್ ರಸ್ತೆ ರಿಪೇರಿ ಮಾಡಿಸಿಬಿಟ್ಟು ರಸ್ತೆ ಸರಿಯಿದೆ ಎಂದು ಹೇಳಿದ್ದಾರೆ. ಅದು ಸರಿ ಇಲ್ಲ. ಸಂಪೂರ್ಣವಾಗಿ ಬಾಗೇಪಲ್ಲಿಯಿಂದ ಕೋಲಾರದವರೆಗೆ ರಾಜ್ಯ ಹೆದ್ದಾರಿ ಹಾಳಾಗಿದೆ. ಅದನ್ನು ಯಾವಾಗ ರಿಪೇರಿ ಮಾಡಿಸುತ್ತೀರಿ? ಅದು ಬಹಳ ಪ್ರಮುಖವಾದಂತಹ ರಸ್ತೆ. ಮತ್ತು ಅದಕ್ಕೆ 48 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ ಎಂದು ಹೇಳಿದ್ದಾರೆ, ಅದಕ್ಕೆ 48 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದರೆ ಕನಿಷ್ಟ ಅದಕ್ಕೆ ಯಾವುದೇ ರೀತಿಯಾದಂತಹ ರಿಪೇರಿಯನ್ನು ಕಂಡಿಲ್ಲ. ಅದನ್ನು ಎಲ್ಲಿ ಇಟ್ಟಿದ್ದಾರೆ? ಯಾವ ಕಿಲೋಮೀಟರ್‌ನಿಂದ ಯಾವ ಕಿಲೋಮೀಟರ್‌ಗೆ ಅದನ್ನು ಹಾಕಿದ್ದಾರೆ, ಎಲ್ಲಿಡಾಂಬರು ಹಾಕಿದ್ದಾರೆಂದು ಅವರು ದಯವಿಟ್ಟು ಹೇಳಬೇಕು.

ಶ್ರೀ ಸಿ.ಎಂ . ಉದಾಸಿ : ಮಾನ್ಯ ಉಪಾಧ್ಯಕ್ಷರೇ, ಬಾಗೇಪಲ್ಲಿ - ಕೋಲಾರ- ಬಂಗಾರಪೇಟೆ ರಾಜ್ಯ ಹೆದ್ದಾರಿ ಒಟ್ಟು 106 ಕಿಲೋಮೀಟರ್ ಉದ್ದ ಇದೆ. ಲೋಕೋಪಯೋಗಿ ಇಲಾಖೆ ಕೋಲಾರ ವಿಭಾಗದ ವ್ಯಾಪ್ತಿಯಲ್ಲಿ ಇರುತ್ತದೆ. ಸದರಿ ರಸ್ತೆಯ ವಿವರ ಈ ಕೆಳಕಂಡಂತಿದೆ. ಬಂಗಾರ ಪೇಟೆ ತಾಲ್ಲೂಕಿನಲ್ಲಿ 11 ಕಿಲೋಮೀಟರ್, ಕೋಲಾರ ತಾಲ್ಲೂಕಿನಲ್ಲಿ 28 ಕೀಲೋಮೀಟರ್, ಚಿಂತಾಮಣಿ ತಾಲ್ಲೂಕಿನಲ್ಲಿ 18 ಕಿಲೋಮೀಟರ್, ಶಿಡ್ಲಘಟ್ಟ 28 ಕಿಲೋಮೀಟರ್ ಬಾಗೇಪಲ್ಲಿ 20 ಕಿಲೋಮೀಟರ್ ಒಟ್ಟು 106 ಕಿಲೋಮೀಟರ್ ರಸ್ತೆ ಇದೆ. 1996-97 1997-98ನೇ ಸಾಲಿನಲ್ಲಿ 3,054 ರಸ್ತೆ ಮತ್ತು ಸೇತುವೆಗಳು ಮಳೆ ಹಾನಿ ಶೀರ್ಷಿಕೆಯಡಿ ನೀಡುವ ಅನುದಾನ 48 ಲಕ್ಷ ರೂಪಾಯಿಗಳು ಇದೆ. ಬಂಗಾರಪೇಟೆ ತಾಲ್ಲೂಕಿನಲ್ಲಿ 2 ಲಕ್ಷ ರೂಪಾಯಿಗಳ ಕೆಲಸ, ಕೋಲಾರ ತಾಲ್ಲೂಕಿನಲ್ಲಿ 10 ಲಕ್ಷ ರೂಪಾಯಿಗಳ ಕೆಲಸ, ಚಿಂತಾಮಣಿ ತಾಲ್ಲೂಕಿನಲ್ಲಿ 9 ಲಕ್ಷ ರೂಪಾಯಿಗಳ ಕೆಲಸ, ಶಿಡ್ಲಘಟ್ಟ ತಾಲ್ಲೂಕಿನಲ್ಲಿ 18 ಲಕ್ಷ ರೂಪಾಯಿಗಳ ಕೆಲಸ. ಬಾಗೇಪಲ್ಲಿ ತಾಲ್ಲೂಕಿನಲ್ಲಿ 9 ಲಕ್ಷ ರೂಪಾಯಿಗಳ ಕೆಲಸ, ಈಗಾಗಲೇ ಪ್ರಗತಿಯಲ್ಲಿದೆ . ಮಳೆಗಾಲಕ್ಕೆ ಮುನ್ನ ಪೂರ್ತಿಗೊಳಿಸಲು ಕ್ರಮ ಕೈಗೊಂಡಿದೆ. ಕೋಲಾರ ಹಾಗೂ ಬಂಗಾರಪೇಟೆ ತಾಲ್ಲೂಕಿನಲ್ಲಿ ಒಟ್ಟು ಇನ್ನು ಹಣ 36 ಲಕ್ಷ ರೂಪಾಯಿ ಬೇಕಾಗಿದೆ. ಇದರ ಜೊತೆಯಲ್ಲಿ ಈಗಾಗಲೇ 22 ಲಕ್ಷ ರೂಪಾಯಿಗಳ ಹಣವನ್ನು ವಾರ್ಷಿಕ ದುರಸ್ತಿ ಅನುದಾನದ ರಸ್ತೆಯಲ್ಲಿ ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕೋಲಾರ ವಿಭಾಗದಲ್ಲಿ ಆಗಿರತಕ್ಕಂಥಾದ್ದು ಸ್ವಲ್ಪ ಮಟ್ಟಿಗೆ ನಿಜ. ಆದರೆ ಮಾನ್ಯ ಸಚಿವರು ಏನು ಹೇಳಿದರು, ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಸೇರಿದಂತಹ 28 ಕಿಲೋಮೀಟರ್ ರಸ್ತೆ, ಬಾಗೇಪಲ್ಲಿಗೆ ಸೇರಿರತಕ್ಕಂಥ 20 ಕಿಲೋಮೀಟರ್ ರಸ್ತೆ, ದಯವಿಟ್ಟು ನನಗೆ ಅವರ ಉತ್ತರ ಬೇಡ. ಮಾನ್ಯ ಮಂತ್ರಿಗಳು ಆ ರಸ್ತೆಗಳಲ್ಲಿ ಬಂದರೆ ಅವರಿಗೆ ಗೊತ್ತಾಗುತ್ತದೆ. 10 ಲಕ್ಷ ರೂಪಾಯಿಗಳನ್ನು ರಿಪೇರಿಗೆ ಹಾಕಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಮೋರಿಗೆ ಹಾಕಿದ್ದಾರೆ. ರಸ್ತೆಗೆ ಅಲ್ಲ. ಒಂದೇ ಒಂದು ಮೋರಿ ಮುಂದು ಬಿಟ್ಟು , ಎರಡು ವರ್ಷ ಆ ಮೋರಿ ರಿಪೇರಿಯಾಗದೆ ಆ ಮೋರಿಗೆ ಹಾಕಿರತಕ್ಕಂಥಾದ್ದು ರಸ್ತೆ ರಿಪೇರಿಗೆ ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ಅವರು ಬರುವುದಕ್ಕೆ ತಯಾರಿದ್ದಾರೆ, ಕರೆದುಕೊಂಡು ಹೋಗಿ .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೋರಿ ರಿಪೇರಿಗೆ ಹಾಕಿರತಕ್ಕಂಥ, ಸಿ.ಡಿ ರಿಪೇರಿಗೆ ಹಾಕಿರತಕ್ಕಂಥ ಹಣವನ್ನು ರಸ್ತೆ ರಿಪೇರಿಗೆ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಮೋರಿಗೆ ಮತ್ತು ರಸ್ತೆಗೆ ವ್ಯತ್ಯಾಸ ಗೊತ್ತಿಲ್ಲವೆಂದು ತಿಳಿದುಕೊಳ್ಳಬೇಕಾಗುತ್ತದೆ. ನಾನು ಹೇಳುವುದೇನೆಂದರೆ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ಇದು ಬಹಳ ಪ್ರಮುಖವಾದಂತಹ ರಸ್ತೆ. ನೀವು ಏನು ಹಣ ತೆಗೆದಿಟ್ಟಿದ್ದೇವೆ ಎಂದು ಹೇಳಿದ್ದೀರಿ, ಎಲ್ಲಾ ಹಣ ಕೂಡ ಮಳೆಗಾಲದಲ್ಲಿ ಆಗಿರತಕ್ಕಂಥ ಮೋರಿಗಳು ಕಡಿದು ಹೋಗಿರುವುದಕ್ಕೆ ರಿಪೇರಿಗೆ ಹಾಕಿದ್ದಾರೆ. ಮರು ಡಾಂಬರು ಹಾಕಿಲ್ಲ, ಅಗಲ ಮಾಡಿಲ್ಲ. ಅಗಲ ಮಾಡಬೇಕು ಮತ್ತು ಮರು ಡಾಂಬರು ಹಾಕಬೇಕು. ಎಲ್ಲಾ ರಿಪೇರಿ ಮಾಡಬೇಕು. ಅದಕ್ಕೆ ಉತ್ತರ ಹೇಳಬೇಕು. ಯಾವಾಗ ಮಾಡುತ್ತೀರಿ? ಎಲ್ಲೆಲ್ಲಿ ಮಾಡುತ್ತೀರಿ? ನೀವು ಹಾಕಿದ್ದೇವೆಂದು ಹೇಳುತ್ತಿರುವುದು ಮೋರಿ ರಿಪೇರಿಗೆ ಹಾಕಿರತಕ್ಕಂಥ ದುಡ್ಡು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ರಸ್ತೆ ಸಾರಿಗೆ ಯೋಗ್ಯವಾಗಿಲ್ಲವೆಂದು ಹೇಳುತ್ತಿದ್ದಾರೆ. ಅವರು ಖಾಸಗಿಯಾಗಿ ನನ್ನ ಹತ್ತಿರ ಬಂದು ಮಾತನಾಡುವಾಗ ಒಂದು ಗಂಟೆಗೆ ಬರಬೇಕಾಗಿರುವಂತಹ ರಸ್ತೆಯಲ್ಲಿ ಎರಡು ಗಂಟೆ ಹಿಡಿಯುತ್ತದೆ ಎಂದು ಹೇಳಿದ್ದಾರೆ. ಈ ರಸ್ತೆ ತೀವ್ರವಾಗಿ ಬರಬೇಕಾದರೆ ರಸ್ತೆ ಸುಧಾರಣೆಯಾಗಬೇಕಾದಂತಹ ಕೆಲಸದಲ್ಲಿ ಹೆಚ್ಚಿನ ಹಣ ಬಿಡುಗಡೆ ಆಗಬೇಕಾಗಿದೆ. ಹಣಕಾಸಿನ ಲಭ್ಯತೆ ಆಧಾರದ ಮೇಲೆ ತೀವ್ರವಾಗಿ ಮಾಡಿಸುತ್ತೇನೆನ್ನುವುದರ ಜೊತೆಗೆ ಸ್ಥಳಕ್ಕೆ ಹೋಗಿ ಬರುತ್ತೇನೆ ಎನ್ನುವ ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಖಾಸಗಿಯಾಗಿ ಹೇಳಿರತಕ್ಕಂಥ ಒಂದು ವಿಷಯ ಹೇಳಿದ್ದಾರೆ. ನಾನು ಖಾಸಗಿಯಾಗಿ ಹೇಳಿರುವುದು ನಿಜ. ಒಂದು ಗಂಟೆ ಪ್ರಯಾಣದ ರಸ್ತೆಗೆ ಎರಡು ಗಂಟೆಯಲ್ಲಿ ಹೋಗುವುದಾದರೆ ಅದು ಯೋಗ್ಯ ರಸ್ತೆಯೇ?

ಉಪಾಧ್ಯಕ್ಷರು : ಅದನ್ನು ಸರಿ ಮಾಡಿಕೊಡುತ್ತೇವೆಂದು ಹೇಳಿದರು. ಕುಳಿತುಕೊಳ್ಳಿ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಸರಿ ಮಾಡಿಕೊಡುತ್ತೇವೆಂದು ಹೇಳಲಿ.

ಉಪಾಧ್ಯಕ್ಷರು : ಹೇಳಿದರು, ನೀವು ಕೇಳಲಿಲ್ಲ.

ಚಿಂಚೋಳಿಯಲ್ಲಿ ಕ್ರೀಡಾಂಗಣದ ನಿರ್ಮಾಣ

196 - ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂಚೋಳಿಯಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಆ) ಕ್ರೀಡಾಂಗಣಕ್ಕೆ ಬೇಕಾಗುವ ಸ್ಥಳ ದೊರಕಿದಯೇ? ದೊರಕಿದ್ದರೆ ಸರ್ವೇ ನಂಬರ್ ಎಷ್ಟು?

ಇ) ಈ ಜಮೀನು ದಾನ ಮಾಡಿದವರ ಹೆಸರೇನು?